**ಅಸಲು ದಾವ ಸಂಖ್ಯೆ: 187/2019**

**ಪಿ.ಡಬ್ಲೂ -1**

**ದಿಃ 15-11-2025 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ SHY ರವರಿಂದಃ-**

1. ನಾನು ನನ್ನ ವಾದಪತ್ರದಲ್ಲಿ ಪಕೀರ ಎನ್ನುವವರು ಅಸಲು ದಾವಾ ಸಂಖ್ಯೆ 36/1990 ರಂತೆ ದಾವೆ ಹೂಡಿದ್ದರು ಎಂದು ಬರೆದಿದ್ದು ನಾನು ಸದರಿ ದಾವೆಯ ದಾಖಲೆಗಳನ್ನು ನೋಡಿರುತ್ತೇನೆ. ಸದರಿ ದಾವೆಯಲ್ಲಿ ಏನೆಂದು ಆದೇಶ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ದಾವೆಯು ನನ್ನ ಅಜ್ಜ ಶನ್ಮುಖ ಹಾಗೂ ಮತ್ತೊಬ್ಬರ ನಡುವೆ ಇತ್ತು ಅವರ ಹೆಸರು ನನಗೆ ಗೊತ್ತಿಲ್ಲ. ಸದರಿ ದಾವೆಯು ಕಲ್ಲಪ್ಪ, ಯಲ್ಲಪ್ಪ ಮತ್ತು ಪಕೀರಪ್ಪ ರವರ ನಡುವೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿರುವ ದಾವಾ ಆಸ್ತಿಗಳೇ ಸದರಿ ಅಸಲು ದಾವಾ ಸಂಖ್ಯೆ 36/1990 ರಲ್ಲಿಯೂ ದಾವಾ ಆಸ್ತಿಗಳಾಗಿದ್ದವು ಎಂದರೆ ಸರಿ. ಆ ದಾವೆಯಲ್ಲಿ ತೋರಿಸಿದ ಸ್ವತ್ತುಗಳ ಅಳತೆ ಈ ದಾವೆಯಲ್ಲಿಯೂ ತೋರಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಈಗಾಗಲೇ ದಾವಾ ಆಸ್ತಿಗಳಲ್ಲಿ ಕಲ್ಲಪ್ಪ, ಯಲ್ಲಪ್ಪ ಮತ್ತು ಪಕೀರಪ್ಪ ರವರ ನಡುವೆ ವಿಭಾಗ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ದಾವೆಯಲ್ಲಿ ಪಕೀರಾ ಹಾಗೂ ಕಲ್ಲಪ್ಪ ರವರ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ದಾವಾ ಆಸ್ತಿಗಳ ಉತಾರಗಳಲ್ಲಿ ಪಕೀರಾ ಮತ್ತು ಕಲ್ಲಪ್ಪ ರವರ ವಾರಸುದಾರರ ಹೆಸರುಗಳು ನಮೂದಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆ ಹೂಡುವ ಮೊದಲು ದಾವಾ ಸ್ವತ್ತಿನ ಉತಾರಗಳನ್ನು ನೋಡಿರುತ್ತೇನೆ ಹಾಗೂ ಅವುಗಳಲ್ಲಿ ಯಾರ ಯಾರ ಹೆಸರು ನಮೂದಿರುತ್ತದೆ ಎಂದು ನೋಡಿರುತ್ತೇನೆ. ಈ ದಾವೆ ಹೂಡುವ ಸಮಯದಲ್ಲಿ ನಾನು ನನ್ನ ವಕೀಲರಿಗೆ ಪಕೀರಾ ಮತ್ತು ಕಲ್ಲಪ್ಪ ರವರ ವಾರಸುದಾರರನ್ನು ದಾವೆಯಲ್ಲಿ ಸೇರಿಸಬೇಕೆಂದು

ಕೇಳಿಕೊಂಡಿರುವುದಿಲ್ಲ ಏಕೆಂದರೆ ಅವರ ಬಗ್ಗೆ ನನಗೆ ಗೊತ್ತೇ ಇಲ್ಲ. ಪಕೀರಾ ಮತ್ತು ಕಲ್ಲಪ್ಪ ರವರ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿದ್ದರೂ ಸಹ ಸದರಿಯರ ವಾರಸುದಾರರನ್ನು ನಾನು ಉದ್ದೇಶಪೂರ್ವಕವಾಗಿ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

2. ಅಸಲು ದಾವಾ ಸಂಖ್ಯೆ 36/1990 ರ ದಾವೆಯಲ್ಲಿ ಆದ ತೀರ್ಪಿನ ವಿರುದ್ಧ ನನ್ನ ಅಜ್ಜ ಮೇಲ್ಮನವಿ ಸಲ್ಲಿಸಿದ್ದರಾ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯ ಕುರಿತು ಅಂತಿಮ ಡಿಕ್ರಿಯೂ ಸಹ ಆಗಿರುತ್ತದೆ ಹಾಗೂ ಅದರ ಪ್ರಕಾರ ಕಲ್ಲಪ್ಪ, ಪಕೀರಾ ಹಾಗೂ ಯಲ್ಲಪ್ಪ ರವರು ಅವರವರ ಹಿಸ್ಸೆಯಲ್ಲಿ ಕಬ್ಜೆಯಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜ ಶನ್ಮುಖ ರವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಶನ್ಮುಖ ರವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಶನ್ಮುಖ ರವರು ನನ್ನ ಅಜ್ಜ ಎಂದು ತೋರಿಸಲು ದಾಖಲೆ ಹಾಜರಪಡಿಸಿರುತ್ತೀರಾ ಎಂದರೆ ನನಗೆ ಗೊತ್ತಿಲ್ಲ. ಶನ್ಮುಖ ರವರು ನನಗೆ ಅಜ್ಜ ಆಗಿರುವುದಿಲ್ಲ ಹಾಗೂ ನನಗೂ ಅವರಿಗೂ ಸಂಬಂಧವೇ ಇರುವುದಿಲ್ಲ ಎಂದರೆ ಸರಿಯಲ್ಲ. ಶನ್ಮುಖ ಮತ್ತು ಅವರ ಸಹೋದರ ಈರಪ್ಪ ರವರ ನಡುವೆ 1970 ಕ್ಕೂ ಮೊದಲೇ ದಾವಾ ಸ್ವತ್ತುಗಳ ಕುರಿತು ವಾಟ್ನಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಶನ್ಮುಖ ರವರು ಅವರ ಪಾಲಿಗೆ ಬಂದ ಆರ್ ಎಸ್ ನಂಬರ 77/4, 77/8, 77/9, 77/10, 10/9, 10/7, 10/4, 10/1, 10/3 ರ ಸ್ವತ್ತುಗಳನ್ನು ನೋಂದಾಯಿತ ಕ್ರಯ ಪತ್ರದ ಮುಖಾಂತರ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರಗಳ ಅನುಸಾರ ಈಗಾಗಲೇ ಮ್ಯುಟೇಶನ ಸಂಖ್ಯೆ 870 ಹಾಗೂ 869 ರ ಪ್ರಕಾರ ಹಕ್ಕುಬದಲಾವಣೆಯೂ ಸಹ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರಗಳನ್ನು

ಇಲ್ಲಿಯವರೆಗೂ ಯಾರೂ ಸಹ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ. ಸದರಿ ಮ್ಯುಟೇಶನ ವರದಿಗಳನ್ನೂ ಸಹ ಇಲ್ಲಿಯವರೆಗೂ ಯಾರೂ ಸಹ ಪ್ರಶ್ನಿಸಿರುವುದಿಲ್ಲ. ನಾನು ಸದರಿ ಮ್ಯುಟೇಶನ ರಜಿಸ್ಟರ ವಹಿಗಳನ್ನು ಈ ದಾವೆ ಹೂಡುವ ಮೊದಲು ನೋಡಿರುವುದಿಲ್ಲ. ಅಸಲು ದಾವಾ ಸಂಖ್ಯೆ 36/1990 ರ ಕುರಿತು ಆದ ಅಂತಿಮ ಡಿಕ್ರಿಯನ್ನು ಸಹ ನಾನು ಓದಿರುವುದಿಲ್ಲ. ಶನ್ಮುಖ ರವರಿಗೆ ದಾವಾ ಸ್ವತ್ತಗಳಲ್ಲಿ ಇದ್ದ ಹಕ್ಕನ್ನು ಅವರು ಅಸಲು ದಾವಾ ಸಂಖ್ಯೆ 36/1990 ಆಗುವ ಮೊದಲೇ ಅವರು ಸದರಿ ಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳನ್ನು ಈಗಾಗಲೇ ಅವರು ಮಾರಾಟ ಮಾಡಿರುವ ಕಾರಣ ಸದರಿ ದಾವಾ ಸ್ವತ್ತುಗಳಲ್ಲಿ ಅವರಿಗಾಗಲೀ ಅವರ ವಾರಸುದಾರರಿಗಾಗಲೀ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಚಂದ್ರವ್ವ ರವರಾಗಲೀ ಅಥವಾ ಶನ್ಮುಖ ರವರಾಗಲೀ ಅಸಲು ದಾವಾ ಸಂಖ್ಯೆ 36/1990 ರ ದಾವೆಯಲ್ಲಿ ಸದರಿ ದಾವಾ ಸ್ವತ್ತುಗಳನ್ನು ಅವರು ಮಾರಾಟ ಮಾಡಿರುವುದಿಲ್ಲ ಎಂದು ಅವರ ಲಿಖಿತ ಹೇಳಿಕೆಯಲ್ಲಾಗಲೀ ಅಥವಾ ಆ ದಾವೆಯ ಸಾಕ್ಷ್ಯ ವಿಚಾರಣೆಯಲ್ಲಾಗಲೀ ಹೇಳಿರುತ್ತಾರಾ ಎಂದರೆ ನನಗೆ ಗೊತ್ತಿಲ್ಲ.

3. ಈಗ ದಾವಾ ಸ್ವತ್ತುಗಳು ನನ್ನ ಕಬ್ಜೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಕುರಿತು ತೆರಿಗೆಯನ್ನು ನಾನೇ ಪಾವತಿ ಮಾಡುತ್ತೇನೆ. ಅದನ್ನು ತೋರಿಸಲು ದಾಖಲೆ ಹಾಜರುಪಡಿಸಿರುತ್ತೀನಾ ಎಂದರೆ ನನಗೆ ಗೊತ್ತಿಲ್ಲ. ನಾನು ದಾವಾ ಸ್ವತ್ತಿನಲ್ಲಿ ಕಬ್ಜೆಯಲ್ಲಿಯೂ ಇರುವುದಿಲ್ಲ ಹಾಗೂ ಅದರ ಕುರಿತು ಯಾವುದೇ ಕಂದಾಯ ಪಾವತಿ ಮಾಡುತ್ತಿಲ್ಲ ಆದರೂ ಸಹ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಂದ್ರವ್ವ ರವರ ತಂದೆ ಶನ್ಮುಖ ರವರು ಅವರ ಪಾಲಿಗೆ ಬಂದ ದಾವಾ ಆಸ್ತಿಗಳನ್ನು ಈಗಾಗಲೇ ಮಾರಾಟ ಮಾಡಿಬಿಟ್ಟಿರುತ್ತಾರೆ

ಎಂದರೆ ಸರಿಯಲ್ಲ. ನಾನು ಚಂದ್ರವ್ವ ರವರ ಮಗಳು ಆಗಿರುವುದಿಲ್ಲ ಆದರೂ ಸಹ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**